# ಬಣ್ಣ ಕಪ್ಪಾದರೇನು?



'ಕೃಷ್ಣಸುಂದರಿ'ಯರೆಂದೇ ಹೆಸರು ಪಡೆದು ಚಿತ್ರರಂಗದಲ್ಲಿ ಮಿಂಚುತ್ತಿರುವ ನಟಿಯರಾದ ರೇಖಾ, ನಂದಿತಾ ದಾಸ್ ಮತ್ತು ಸ್ಮಿತಾ.

**ಹೆಣ್ಣನ್ನು ಕಪ್ಪು ಕಪ್ಪೆಂದೇಕೆ ಬೀಳುಗಳೆಯುವಿರಿ?**

**ಸವಿತಾ ಶಾಂತಪ್ರಿಯ, ಉಡುಪಿ**

ಅದೊಂದು ಮದುವೆ ಕಾರ್ಯಕ್ರಮ. ಹೆಂಗಸರು, ಮಕ್ಕಳು, ಹುಡುಗಿಯರು ಜರತಾರಿ ಸೀರೆ, ಲಂಗ ತೊಟ್ಟುಕೊಂಡು ಸಂಭ್ರಮ ದಿಂದ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದರು. ಅಲ್ಲೇ ಒಬ್ಬ ಪುಟ್ಟ ಹುಡುಗಿಯೂ ಎಲ್ಲರೊಂದಿಗೆ ಸಂಭ್ರಮಿಸುತ್ತಿದ್ದಳು. ಆಕೆಯನ್ನು ಕಂಡ ಕೆಲವು ಹಿರಿಯ ಸ್ತ್ರೀಯರು ಉದ್ಗರಿಸುತ್ತಾರೆ `ಹಾ! ಎಂಥಾ ಕಪ್ಪು ಈ ಹೆಣ್ಣ್. ಯಾರು ಕೊಂಡು ಹೋಪ?'

ಒಂದು ಶಾಲೆ  ಶಾಲಾ ವಾರ್ಷಿಕೋತ್ಸವಕ್ಕೆ ರಾಧಾಕೃಷ್ಣ ನೃತ್ಯ ತರಬೇತಿ ನಡೆಯುತ್ತಿತ್ತು.  ಹೇಳಿಕೊಡುತ್ತಿದ್ದ ಅಧ್ಯಾಪಿಕೆಯರು ಕೃಷ್ಣನ ಪಾತ್ರಕ್ಕಾಗಿ ಆಯ್ಕೆಯ ಸಂದರ್ಭದಲ್ಲಿ ಆಕೆಯನ್ನೇ ತೋರಿಸಿ 'ಈಕೆಯನ್ನು ಕೃಷ್ಣ ಮಾಡಿದರೆ ಒಳ್ಳೆಯದು. ಮೈಗೆ ನೀಲಿ ಹಚ್ಚುವ ಕೆಲಸವಿಲ್ಲ' ಎಂದು ನಗೆಯಾಡುತ್ತಾರೆ.

ಎರಡೂ ಸಂದರ್ಭಗಳಲ್ಲಿ ಆ ಪುಟ್ಟ ಹುಡುಗಿ ದುಃಖದಿಂದ ಓಡಿ ಹೋದದ್ದು ತನ್ನ ಅಮ್ಮನ ಬಳಿಗೆ. ಅಮ್ಮ ಧೈರ್ಯ ತುಂಬುತ್ತಾ 'ಬಿಟ್ಟಾಕಮ್ಮ. ಕಪ್ಪಿನವಳಿಗೆ ಅಲಂಕಾರ ಮಾಡುವುದನ್ನು ಕಂಡ ಬಿಳಿಯವಳು ಬಾವಿಗೆ ಹಾರಿದಳಂತೆ. ಈ ಕಪ್ಪು ಮಾಸಿ ಹೋಗುವಂತೆ ನೀ ಬೆಳೆಯಬೇಕು. ಮುಂದೆ ಒಂದು ದಿನ ನಿನ್ನ ಕಪ್ಪು ಪ್ರಶ್ನೆಯೇ ಆಗ ದಂತೆ ನೀ ಎದ್ದು ನಿಲ್ಲಬೇಕು. ನಿನ್ನ ಕಪ್ಪು ಎಲ್ಲಿ ಹೋಯಿತು ಎಂದು ಇವರೆಲ್ಲ ಹುಡುಕುವಂತಾಗಬೇಕು....' ಎಂದೆಲ್ಲಾ ಹೇಳುತ್ತಿದ್ದರು.

ನಮ್ಮ ಸಮಾಜದಲ್ಲಿ ಕಪ್ಪು ಬಣ್ಣದವರ ಮೇಲಿನ ತಾತ್ಸಾರ, ಜೊತೆಗೆ ಬಿಳಿ ಬಣ್ಣದವರಿಗೆ ಮಣೆ ಈಗಲೂ ಕಂಡುಬರುತ್ತಿದೆ. ಶಾಲೆಯ, ಕುಟುಂಬದ ವಾತಾವರಣದಲ್ಲಿ ಅದೆಷ್ಟೋ ಹುಡುಗಿಯರು ಈ ಸಮಸ್ಯೆಯಿಂದ ಬಳಲುತ್ತಾರೆ. ಮದುವೆಯ ಸಂದರ್ಭದಲ್ಲಂತೂ ಹುಡುಗಿಯ ಆಯ್ಕೆಗೆ ಆಕೆಯ ಗುಣ, ವಿದ್ಯೆ, ಉದ್ಯೋಗ ಇವೆಲ್ಲಕ್ಕಿಂತ ಮೈಬಣ್ಣವೇ ಮಾನದಂಡ.

ಚಿಕ್ಕಪ್ರಾಯದಿಂದ ತಮ್ಮ ಚರ್ಮದ ಬಣ್ಣದ ಬಗ್ಗೆ ತಾತ್ಸಾರ ಅನುಭವಿಸುತ್ತಾ ಬೆಳೆದ ಹುಡುಗಿ ಸಹಜವಾಗಿಯೇ ಹಿಂಜರಿಕೆಯ ಗುಣವನ್ನು ಬೆಳೆಸಿಕೊಳ್ಳುತ್ತಾಳೆ. `ನನ್ನ ಬಣ್ಣ ಬಿಳಿಯಿಲ್ಲ. ನಾನು ನೋಡಲು ಸುಂದರವಾಗಿಲ್ಲ. ಹಾಗಾಗಿ ನನ್ನನ್ನು ಯಾರೂ ಇಷ್ಟ ಪಡುವುದಿಲ್ಲ...' ಇತ್ಯಾದಿ ಅನಗತ್ಯ ತುಮುಲಗಳನ್ನು ಬೆಳೆಸಿಕೊಳ್ಳು ತ್ತಾಳೆ. ಜೀವನದಲ್ಲಿ ನಡೆಯುವ ಅನೇಕ ಘಟನೆಗಳನ್ನು ಅದಕ್ಕೇ ತಾಳೆಹಾಕಿ ಸಹಜವಾಗಿ ಮುದುಡಿಕೊಳ್ಳುತ್ತಾಳೆ. ಹುಡುಗಿಯರು ಪ್ರಬುದ್ಧರಾಗುವ ಸಂದರ್ಭದಲ್ಲಿ ಇಂತಹ ಕೀಳರಿಮೆಯಿಂದಾಗಿ ಮಾನಸಿಕ ಕಾಯಿಲೆಗಳಿಗೆ ತುತ್ತಾಗುವುದೂ ಇದೆ.

ಇದು ಯಾಕೆ ಹೀಗೆ? ನಿಜವಾಗಿಯೂ ಸೌಂದರ್ಯ ಚರ್ಮದಲ್ಲಿ ಅಡಗಿದೆಯೇ? ನಮ್ಮ ಪುರಾಣದಲ್ಲಿ ಬರುವ ಅದೆಷ್ಟು ಸ್ತ್ರೀಯರು ಕಪ್ಪುವರ್ಣದವರಾಗಿದ್ದರೂ ಅಪ್ರತಿಮ ಸೌಂದರ್ಯವತಿಯರ ಸಾಲಿನಲ್ಲಿ ನಿಲ್ಲುವುದಿಲ್ಲ. ಸೌಂದರ್ಯವೇ ಮಾನದಂಡವಾದ ಚಿತ್ರರಂಗದಲ್ಲಿ ಫ್ಯಾಶನ್ ಪ್ರಪಂಚದಲ್ಲಿ ಅದೆಷ್ಟು ಕೃಷ್ಣವರ್ಣದ ಸುಂದರಿಯರಿಲ್ಲ. ಅವರು ತಾವು ಕಪ್ಪು ಎಂಬ ಹಿಂಜರಿಕೆ ಮನಸ್ಸಿನಲ್ಲಿ ತುಂಬಿಕೊಂಡಿದ್ದರೆ  ಸಾಧನೆ ಮಾಡುವುದು ಸಾಧ್ಯವಿತ್ತೆ?

ತಾಳೆ ಹಾಕಿ ನೋಡಿದರೆ ಚರ್ಮದ ಬಣ್ಣಕ್ಕೂ ಬದುಕಲ್ಲಿ ಸಿಗುವ ಅವಕಾಶಗಳಿಗೂ ಹೊಂದಾಣಿಕೆಯೇ ಇಲ್ಲ. ಆದರೂ ಏಕೆ ಹೀಗೆ?

ಕೌಟುಂಬಿಕ ವಲಯದಲ್ಲಿ ಇರುವ ಈ ತಾರತಮ್ಯ ಹೊರಗಿನ ಸಂದರ್ಭಗಳಲ್ಲಿ ಅಷ್ಟಾಗಿ ಇಲ್ಲ. ಕಪ್ಪು ಆಗಿರುವುದಕ್ಕೆ ಯಾರಿಗೂ ಪರೀಕ್ಷೆಯಲ್ಲಿ ಕಡಿಮೆ ಮಾರ್ಕ್ ಬಿದ್ದ ಉದಾಹರಣೆಯಿಲ್ಲ. ಉದ್ಯೋಗವಕಾಶದಿಂದ ವಂಚಿತರಾದದ್ದಿಲ್ಲ. ಕೆಲಸ ಮಾಡುವ ವಾತಾವರಣದಲ್ಲಿ ತಾರತಮ್ಯವಿಲ್ಲ. ಪ್ರಶಸ್ತಿ ಪುರಸ್ಕಾರಗಳ ಆಯ್ಕೆಯ ಸಂದರ್ಭದಲ್ಲಿಯೂ ಇಲ್ಲ.

`ನಮ್ಮ ಕಾರ್ಪೊರೇಟ್ ಜಗತ್ತಿನಲ್ಲಂತೂ ಸರ್ವರಿಗೂ ಸಮಬಾಳ್ವೆಯ ಅವಕಾಶ. ಅಲ್ಲಿ ಯಾರೂ ನಮ್ಮ ಬಣ್ಣ, ಅಪಿಯರೆನ್ಸ್, ನಾವು ತೊಡುವ ಬಟ್ಟೆ  ಇವಾವುದನ್ನೂ ಗಮನಿಸುವುದೇ ಇಲ್ಲ. ಇಲ್ಲಿ ನಮ್ಮ ಸಾಮರ್ಥ್ಯಕ್ಕೆ ಮಾತ್ರ ಅವಕಾಶ. ಬಣ್ಣ ಯಾವುದೇ ಇರಲಿ ಸಾಮರ್ಥ್ಯವಿದ್ದರೆ ಮಾತ್ರ ಇಲ್ಲಿ ಅಸ್ತಿತ್ವ ಕಂಡುಕೊಳ್ಳಬಹುದು' ಎನ್ನುತ್ತಾರೆ ಐಬಿಎಂ ಉದ್ಯೋಗಿ ಸಹನಾ. ಬೆಂಗಳೂರಿನಲ್ಲಿ ಸ್ವಂತ ಉದ್ದಿಮೆ ನಡೆಸುತ್ತಿರುವ ರೇಷ್ಮಾ `ಈ ತಾರತಮ್ಯ ಕಾರ್ಪೊರೇಟ್ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಆದರೆ ಸಾಮಾಜಿಕ ವಲಯದಲ್ಲಿ ಮಾತ್ರ ಇನ್ನೂ ಇದೆ' ಎಂದು ಅಭಿಪ್ರಾಯಪಡುತ್ತಾರೆ.

ಬೆಂಗಳೂರಿನ ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಉದ್ಯೋಗಿ ಯಾಗಿದ್ದ ಲತಾ ಪ್ರಕಾರ, 'ಕಪ್ಪು, ಸೌಂದರ್ಯ, ಅಪಿಯರೆನ್ಸ್ ಇವೆಲ್ಲಕ್ಕಿಂತ ಮುಖ್ಯವಾಗುವುದು ನಮ್ಮ ಟ್ಯಾಲೆಂಟ್. ಇದಕ್ಕಿಂತಲೂ ಮುಖ್ಯ ನಮ್ಮ ಸಂವಹನ ಕಲೆ. ನಾವು ಇತರರೊಂದಿಗೆ ಹೇಗೆ ಬೆರೆಯುತ್ತೇವೆ, ಎಷ್ಟು ಚೆನ್ನಾಗಿ ತೊಡಗಿಸಿಕೊಳ್ಳುತ್ತೇವೆ ಎಂಬುದು. ನಮ್ಮ ಸಾಮರ್ಥ್ಯ ಎಷ್ಟೇ ಇದ್ದರೂ ನಾವು ಹಿಂಜರಿಕೆಯಿಂದಲೋ